**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1571/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀನಿವಾಸ್ ಎಸ್.ಕೆ | ಪ್ರಾಸಾ-8 |
| ತಂದೆಯ ಹೆಸರು | : ಕೆಂದಣ್ಣ | ಚಾಸಾ-33 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವಿದ್ಯುತ್ ಪರಿವೀಕ್ಷಕರು | ದಿನಾಂಕಃ 11.08.2026. |
| ವಾಸಸ್ಥಳ | : ಬೆಂಗಳೂರು. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ಸಾಕ್ಷಿಯು ವಿಡಿಯೋ ಕಾನ್ಫರೆನ್ಸ್ ನ ಮುಖಾಂತರ ಸಾಕ್ಷಿ ವಿಚಾರಣೆಗೆ ಹಾಜರಾಗಿರುತ್ತಾರೆ.

ನಾನು ಜನವರಿ 2020 ರಿಂದ ಜುಲೈ 2024 ರವರೆಗೆ ವಿದ್ಯುತ್ ಪರಿವೀಕ್ಷಕರಾಗಿ ಶಿವಮೊಗ್ಗದಲ್ಲಿ ವಿದ್ಯುತ್ ಪರಿವೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.07.09.2022 ರಂದು ಮೆಸ್ಕಾಂ ಮೂಡಿಗೆರೆಯ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ದೂರವಾಣಿ ಕರೆ ಮಾಡಿ ನಮ್ಮ ಉಪ-ವಿಭಾಗ ವ್ಯಾಪ್ತಿಯ ಬಿ. ಹೊಸಹಳ್ಳಿ ಗ್ರಾಮದಲ್ಲಿ ವಿದ್ಯುತ್ ಅವಗಡವು ಸಂಭವಿಸಿದ್ದು ಅದನ್ನು ಪರೀಕ್ಷಿಸಿ ವರದಿಯನ್ನು ನೀಡುವಂತೆ ನನಗೆ ಮನವಿ ಮಾಡಿಕೊಂಡಿರುತ್ತಾರೆ. ಸದರಿ ಮನವಿ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಪರೀಕ್ಷಿಸಲಾಗಿ ಬಿ.ಹೊಸಹಳ್ಳಿಯ ಗ್ರಾಮಸ್ಥರು ಗಣಪತಿ ವಿಸರ್ಜನೆಗಾಗಿ ನಿರ್ಮಿಸಿಕೊಂಡಿದ್ದಂತಹ ಪ್ರಭಾವಳಿಯು, ಹೆಚ್ಚಿನ ಗಾಳಿ ಮಳೆಯಿಂದಾಗಿ ಕೆಳಗೆ ಬಾಗಿದ್ದಂತಹ ವಿದ್ಯುತ್ ತಂತಿಗೆ ತಾಕಿ ವಿದ್ಯುತ್ ಅವಗಡವು ಸಂಭವಿಸಿರುತ್ತದೆ ಎಂದು ವರದಿಯನ್ನು ನೀಡಿರುತ್ತೇನೆ. ಸದರಿ ಅವಗಡದಿಂದಾಗ 3 ಜನರು ಗಾಯಗೊಂಡು ಮೃತ ಪಟ್ಟಿರುತ್ತಾರೆ ಮತ್ತು ನಾನು ತಯಾರಿಸಿದ ವರದಿಯನ್ನು ನಾನು ನನ್ನ ಮೇಲಾಧಿಕಾರಿಯವರಿಗೆ ಹಸ್ತಾಂತರಿಸಿರುತ್ತೇನೆ.

ನಿಪಿ-8 ಮತ್ತು 9 ರಲ್ಲಿರುವ ಪ್ರಭಾವಳಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ**

ಮೆಸ್ಕಾಂ ಮೂಡಿಗೆರೆಯ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಮಾಡಿರುವ ಮನವಿಯ ಪ್ರತಿಯನ್ನು ಈ ಪ್ರಕಣರದಲ್ಲಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ದೂರವಾಣಿಯ ಮುಖಾಂತರ ಮನವಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ನಾನು, ಉಪ-ವಿದ್ಯುತ್ ಪರಿವೀಕ್ಷಕರು, ಮೆಸ್ಕಾ ಅಧಿಕಾರಿಗಳು, ಚಿಕ್ಕಮಗಳೂರು ಮತ್ತು ಇತರೆ ಸಾರ್ವಜನಿಕರು ಹಾಜರಿದ್ದರು. ಸ್ಥಳವನ್ನು ಪರೀಕ್ಷಿಸಿದ ಬಾಬ್ತು ನಾನು ಮಹಜರ್ ನ್ನು ಬರವಣಿಗೆ ಮಾಡಿರುತ್ತೇನೆ. ನಾನು ತಯಾರಿಸಿದ ವರದಿಯನ್ನು ನನ್ನ ಮೇಲಾಧಿಕಾರಿಯವರಿಗೆ ಹಸ್ತಾಂತರಿಸಿ ನ್ಯಾಯಾಲಯಕ್ಕೆ ನೀಡಲು ಸೂಚಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ನನ್ನ ಮೇಲಾಧಿಕಾರಿಯವರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾವು

ಸ್ಥಳವನ್ನು ಭೇಟಿ ನೀಡಿದ ಸಮಯದಲ್ಲಿ ಇತರೆ ಸ್ವತಂತ್ರ್ಯ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿರುವುದಿಲ್ಲ. ವಿದ್ಯುತ್ ಅವಗಡವು ಸಂಭವಿಸಿದ ಸ್ಥಳದಲ್ಲಿ ವಿದ್ಯುತ್ ಕಂಬವು 8 ಮೀಟರ್ ಉದ್ದ ಇತ್ತು. ಸಾಮಾನ್ಯವಾಗಿ ವಿದ್ಯುತ್ ಕಂಬವು 8 ಮೀಟರ್ ಉದ್ದ ಇರಬೇಕು. ಸಾಮಾನ್ಯವಾಗಿ ವಿದ್ಯುತ್ ತಂತಿಯು ಭೂಮಿಯಿಂದ 6.1 ಮೀಟರ್ ಅಂತರವಿರಬೇಕು.

ವಿದ್ಯುತ್ ಅವಗಡವು ಸಂಭವಿಸಿದ ಸ್ಥಳದಲ್ಲಿ ವಿದ್ಯುತ್ ತಂತಿಯು ಒಂದು ಕಂಡಕ್ಟರ್ 4.1 ಮೀಟರ್ ಮತ್ತು ಇನ್ನೊಂದು ಕಂಡಕ್ಟರ್ 4.22 ಮೀಟರ್ ಅಂತರದಲ್ಲಿ ಇತ್ತು. ಸದರಿ ಸ್ಥಳದಲ್ಲಿ ಸಾಮಾನ್ಯವಾಗಿ ಇರುವುದಕ್ಕಿಂತ ಹೆಚ್ಚಿನದಾಗಿ ವಿದ್ಯುತ್ ತಂತಿಯು ಕೆಳಗೆ ಬಾಗಿತ್ತು. ವಿದ್ಯುತ್ ಅವಗಡವು ಸಂಭವಿಸಿದ ಸ್ಥಳವು ಸಾರ್ವಜನಿಕರು ಹೆಚ್ಚಿನದಾಗಿ ಓಡಾಡುವ ಸ್ಥಳ ಎಂದರೆ ಸರಿ. ವಿದ್ಯುತ್ ಅವಗಡವು ಸಂಭವಿಸಿದ ಸ್ಥಳದಲ್ಲಿ ವಿದ್ಯುತ್ ತಂತಿಗಳ ಸಂರಕ್ಷಣೆ ಬಲೆಯನ್ನು ಅಳವಡಿಸಿರಲಿಲ್ಲ. ಸದರಿ ಸ್ಥಳದ ವಿದ್ಯುತ್ ತಂತಿಯಲ್ಲಿ 11 ಕೆ.ವಿ. ವಿದ್ಯುತ್ ಸಂಚಾರವಾಗುತ್ತಿತ್ತು. ನಾನು ಪರೀಕ್ಷಿಸಿದ ಸ್ಥಳದಲ್ಲಿ ವಿದ್ಯುತ್ ಕಂಬವು ಕೆಲವು ಬಾಗಿದ ರೀತಿಯಲ್ಲಿ ಇದ್ದವು. ಸದರಿ ಕಂಬಗಳು ಅಂದಾಜು 25 ರಿಂದ 29 ವರ್ಷ ಹಳೆಯದ್ದಾಗಿರಬಹುದು ಮತ್ತು ಸದರಿ ಕಂಬಗಳಿಗೆ ಏನಾದರು ಹಾನಿಯಾದಲ್ಲಿ ಬದಲಿಸಬೇಕು ಎಂದು ಆದೇಶವಿರುತ್ತದೆ. ನಾನು ನೋಡಿ ಪ್ರಭಾವಳಿಯು ಅಂದಾಜು 4 ಮೀಟರ್ ಉದ್ದ ಇತ್ತು. ವಿದ್ಯುತ್ ಅವಗಡವು ಸಂಭವಿಸಿದ ಸ್ಥಳದಲ್ಲಿ ರಸ್ತೆಯು ಗುಂಡಿಯಿಂದ ಕೂಡಿತ್ತು ಎಂದರೆ ಸರಿ. ವಿದ್ಯುತ್ ಅವಗಡವು ಸಂಭವಿಸುವ ಹಿಂದಿನ ದಿನ ಹೆಚ್ಚಿನದಾಗಿ ಮಳೆಯಾಗಿತ್ತು ಎಂದರೆ ಸರಿ. ಆದರೆ ಸಾರ್ವಜನಿಕರಿಂದ ಮರದ ಕೊಂಬೆಯು ವಿದ್ಯುತ್ ತಂತಿಯ ಮೇಲೇ ಬಿದ್ದಿದ್ದ ವಿಷಯವು ತಿಳಿದು ಬಂದಿರುತ್ತದೆ. ಆದ ಕಾರಣ ಸದರಿ ಸ್ಥಳದಲ್ಲಿ ವಿದ್ಯುತ್ ತಂತಿಯು ಕೆಳಗೆ ಬಾಗಿದ್ದವು ಎಂದರೆ ಸರಿ.

ವಿದ್ಯುತ್ ಅವಗಡವು ಮೆಸ್ಕಾಂ ರವರ ಅಜಾಗ್ರತೆ ಮತ್ತು ನಿರ್ಲಕ್ಷ್ಯತನದಿಂದ ಸಂಭವಿಸಿರುತ್ತದೆ ಎಂದರೆ ಸದರಿ ವಿಷಯವನ್ನು ಅವರ ಬಳಿಯೇ ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ತಯಾರಿಸಿದ ವರದಿಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ನನ್ನ ಮತ್ತು ನನ್ನ ಮೇಲಾಧಿಕಾರಿಯವರ ಸಮಕ್ಷಮದಲ್ಲಿ ಸದರಿ ವರದಿಯನ್ನು ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ 40 ರಿಂದ 50 ಅಡಿಯ ಅಂತರ ಇರಬೇಕು ಮತ್ತು ಘಟನಾ ಸ್ಥಳದಲ್ಲೂ ಅದೇ ರೀತಿಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಆರೋಪಿಗೂ, ಈ ಪ್ರಕರಣಕ್ಕೂ, ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**2 ನೇ ಆರೋಪಿಪರ ವಕೀಲರು 1 ನೇ ಆರೋಪಿಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.